**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು.**

ಸಿ.ಸಿ. ಸಂಖ್ಯೆ: **909/2021**

ಪಿರ್ಯಾದುದಾರರು: - ಸರ್ಕಾರದ ಪರವಾಗಿ
ಅರೇಹಳ್ಳಿ ಪೋಲೀಸ್

ವಿರುದ್ಧ

ಆರೋಪಿ:ಗಳು:

1 ನಂದೀಶ ಬಿನ್ ಪುಟ್ಟಸ್ವಾಮಿಶೆಟ್ಟಿ
ಸುಮಾರು 35 ವರ್ಷ ವಯಸ್ಸು,
ವಾಸ: ಅಂಕಿಹಳ್ಳಿ ಪೇಟೆ ಗ್ರಾಮ, ಬಿಕ್ಕೋಡು ಹೋಬಳಿ,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

2 ನಂದೀಪ ಬನ್ ಪುಟ್ಟಸ್ವಾಮಿಶೆಟ್ಟಿ
ಸುಮಾರು 28 ವರ್ಷ ವಯಸ್ಸು,
ವಾಸ: ಅಂಕಿಹಳ್ಳಿ ಪೇಟೆ ಗ್ರಾಮ, ಬಿಕ್ಕೋಡು ಹೋಬಳಿ,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

## :: ದೋಷಾರೋಪಣೆ ::

ಶ್ರೀಮತಿ ಸಲ್ಮ ಎ.ಎಸ್., ಬಿ.ಬಿ.ಎ., ಎಲ್‌ಎಲ್.ಬಿ.,(ಹಾನ್ಸ್) ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬೇಲೂರು ಆದ ನಾನು ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆ.

ದಿನಾಂಕ: **15.07.2021** ರಂದು ಬೆಳಗ್ಗೆ **10.30** ಗಂಟೆ ಸಮಯದಲ್ಲಿ ಬೇಲೂರು ತಾಲ್ಲೂಕು, ಬಿಕ್ಕೋಡು ಹೋಬಳಿ, ಅಂಕಿಹಳ್ಳಿ ಪೇಟೆ ಗ್ರಾಮದ ಸರ್ಕಾರಿ ಪ್ರಾಥಮಿಕ ಪಾಠ ಶಾಲೆಯ ಮುಂಬಾಗದಲ್ಲಿ ಚಾಸಾ.**1**-ಪ್ರಕಾಶ ನಡೆದುಕೊಂಡು ಹೋಗುತ್ತಿರುವಾಗ ಆರೋಪಿತರಾದ ನೀವು ಚಾಸಾ.**1**ರವರನ್ನು ಅಡ್ಡಗಟ್ಟಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **341** ಸಹವಾಚಕ **34** ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

**2.** ಎರಡನೆಯದಾಗಿ, ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು ಚಾಸಾ.**1**ರವರನ್ನು ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ಮೂಲಕ ಭಾರತೀಯ ದಂಡ

ಸಂಹಿತೆ ಕಲಂ **504** ಸಹವಾಚಕ **34** ರಡಿ ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

**3.** ಮೂರನೆಯದಾಗಿ, ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ **1**ನೇ ಆರೋಪಿಯಾದ ನೀನು ಚಾಸಾ.**1**ರವರಿಗೆ ಸೊಂಟಕ್ಕೆ ಒದ್ದು , ನಂತರ **2**ನೇ ಆರೋಪಿಯಾದ ನೀನು ಕೈಗಳಿಂದ ಮೈಕೈಗೆ ಹಲ್ಲೆ ಮಾಡಿ ಚಾಸಾ.**1**ರವರ ಸೊಂಟ ಮತ್ತು ವೈಕೈಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **323** ಸಹವಾಚಕ **34** ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

**ಮೇಲ್ಕಂಡ ಆರೋಪಿತರಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.**

ಸಹಿ/-

(ಸಲ್ಮ ಎ.ಎಸ್.)
1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು.

ಸ್ಥಳ: ಬೇಲೂರು
ದಿನಾಂಕ: 06.06.2026